ದಿನಾಂಕ 28.05.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಶ್ರೀ. ಐ.ಆರ್.ಪಿ. ವಕೀಲರಿಂದಃ-**

ವಾದಿಯು 1 ನೇ ಪ್ರತಿವಾದಿಯ ವಿರುದ್ಧ ದಾವೆಯನ್ನು ಹೂಡಿರುತ್ತಾರೆ. 1 ನೇ ಪ್ರತಿವಾದಿಯು ವಾದಿಗೆ ಸೇರಿದ 1 ಎಕರೆ ಜಮೀನನ್ನು ಕಬಳಿಸಿರುವ ಕಾರಣ ವಾದಿಯು ಅವರ ವಿರುದ್ಧ ದಾವೆಯನ್ನು ಹೂಡಿರುತ್ತಾರೆ. ನಾನು ವಾದಪತ್ರವನ್ನು ಓದಿ ತಿಳಿದುಕೊಂಡಿರುವುದಿಲ್ಲ. ವಾದಿಯು ಸರ್ವೆ ನಂ. 137/2 ರ ಸ್ವತ್ತಿಗೆ ಸಂಬಂಧಿಸಿದಂತೆ ದಾವೆಯನ್ನು ಹೂಡಿರುತ್ತಾರೆ. ಸದರಿ ಸ್ವತ್ತು ವಾದಿಗೆ ವಿಭಾಗದ ಮೂಲಕ ಬಂದಿರುತ್ತದೆ. ಪಟ್ಟೇದಾರರು ಮತ್ತು ಕುಟುಂಬದ ಸದಸ್ಯರ ನಡುವೆ ವಿಭಾಗವಾಗಿ ಆ ಮೂಲಕ ವಾದಿಯ ಹಿಸ್ಸೆಗೆ ಬಂದಿರುತ್ತದೆ. ಸದರಿ ವಿಭಾಗವು 1997 ನೇ ಇಸವಿಯಲ್ಲಿ ಆಗಿರುತ್ತದೆ. ಸದರಿ ವಿಭಾಗವು ಮೌಖಿಕವಾಗಿ ಆಗಿರುತ್ತದೆ. ಮೌಖಿಕ ವಿಭಾಗದ ಪ್ರಕಾರ ಜಮೀನುಗಳನ್ನು ಸರ್ವೆ ಮಾಡಲಾಗಿರುತ್ತದೆ. ವಾದಿಯು ಹೊರಗಡೆ ವಾಸವಾಗಿದ್ದುದ್ದರಿಂದ ವಿಭಾಗದ ಪ್ರಕಾರ ಜಮೀನಿನ ಸ್ವಾಧೀನವನ್ನು ಪಡೆದುಕೊಂಡಿರುವುದಿಲ್ಲ. ವಾದಿಯ ಹಿಸ್ಸೆಗೆ ನೀಡಲಾಗಿದ್ದ ಜಮೀನು ಹಾಗೆಯೇ ಇದ್ದು ಅದರಲ್ಲಿ ವ್ಯವಸಾಯ ಮಾಡುತ್ತಿರಲಿಲ್ಲ. ಸದರಿ ಜಮೀನಿನ ಪೂರ್ವಕ್ಕೆ ನನಗೆ ಸೇರಿದ ಸರ್ವೆ ನಂ.135/5 ರ ಜಮೀನು, ಪಶ್ಚಿಮಕ್ಕೆ 1 ನೇ ಪ್ರತಿವಾದಿಗೆ ಸೇರಿದ ಜಮೀನು ಇದ್ದು, ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಉತ್ತರಕ್ಕೆ 1 ನೇ ಪ್ರತಿವಾದಿಗೆ ಸೇರಿದ ಗದ್ದೆ-ಜಮೀನು ಇದ್ದು, ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ದಕ್ಷಿಣಕ್ಕೆ ನನಗೆ ಸೇರಿದ ಸರ್ವೆ ನಂ.135/1 ರ ಜಮೀನು ಇದೆ.

ವಾದಿಯ ಜಮೀನಿಗೆ ಹೊಂದಿಕೊಂಡಂತೆ ಪೈಸಾರಿ ಮತ್ತು ಕಡಂಗ ಜಾಗ ಇರುವುದಿಲ್ಲ. ಮೌಖಿಕ ವಿಭಾಗದ ಪ್ರಕಾರ ವಾದಿಯ ಜಮೀನನ್ನು ಸರ್ವೆ ಮಾಡಿದ ಸಂದರ್ಭದಲ್ಲಿ 1 ನೇ ಪ್ರತಿವಾದಿಯು ತನ್ನ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದು, ಕೃಷಿ ಮಾಡುತ್ತಿದ್ದರು. 1 ನೇ ಪ್ರತಿವಾದಿಯು ಭಾರತೀಯ ಸೇನೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರು 1998 ನೇ

ಇಸವಿಯಲ್ಲಿ ನಿವೃತ್ತರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಮೊದಲು ಮುಂಬೈಯಲ್ಲಿ ಕೆಲಸ ಮಾಡುತ್ತಿದ್ದು, ಪ್ರಸ್ತುತ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ. ವಾದಿಯು ಆರೋಗ್ಯವಾಗಿ ಇದ್ದಾರೆ. ನಾನು ಒಂದು ವಾರದ ಹಿಂದೆ ಅವರನ್ನು ಭೇಟಿಯಾಗಿರುತ್ತೇನೆ. ಮೌಖಿಕ ವಿಭಾಗದ ಮೂಲಕ ನೀಡಿದ ಜಾಗದಲ್ಲಿ ವಾದಿಯು ಕಳೆದ 11 ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದಾರೆ. ವಾದಿಯು ತಾನು ವ್ಯವಸಾಯ ಮಾಡುತ್ತಿರುವ ಜಮೀನಿನ ಮೇಲೆ ದಾವೆ ಹೂಡಿರುತ್ತಾರೆ.

2001 ರಲ್ಲಿ ದಾವಾ ಸ್ವತ್ತನ್ನು ಅಳತೆ ಮಾಡಿದ ಸಂದರ್ಭದಲ್ಲಿ 1ನೇ ಪ್ರತಿವಾದಿಯು ದಾವಾ ಸ್ವತ್ತಿನ ಪೈಕಿ 1 ಎಕರೆ ಒತ್ತುವರಿ ಮಾಡಿರುವ ವಿಚಾರ ಗೊತ್ತಾಗಿರುತ್ತದೆ. ಸರ್ವೆ ಮಾಡುವ ಸಂದರ್ಭದಲ್ಲಿ ನಾನು ಹಾಜರಿದ್ದೆನು. ಸರ್ವೆ ಇಲಾಖೆಯವರು ನನಗೆ ನೋಟಿಸನ್ನು ನೀಡಿದ್ದರು. ಅಳತೆಯ ಸಂದರ್ಭದಲ್ಲಿ ನನ್ನೊಂದಿಗೆ ವಾದಿ ಮತ್ತು 1ನೇ ಪ್ರತಿವಾದಿಯು ಸಹ ಇದ್ದರು. ಆ ದಿವಸ ಭೂಮಾಪಕರು ಮಹಜರ್ ಅನ್ನು ಸ್ಥಳದಲ್ಲಿ ಬರೆದಿದ್ದು, ಅದಕ್ಕೆ ನಾನು ಸಹಿಯನ್ನು ಮಾಡಿರುತ್ತೇನೆ. 1ನೇ ಪ್ರತಿವಾದಿಯು ಅಳತೆ ಸರಿಯಿಲ್ಲವೆಂದು ಮಹಜರಿಗೆ ಸಹಿ ಮಾಡಿರುವುದಿಲ್ಲ. ನಂತರ, 2-3 ದಿನಗಳ ಬಳಿಕ 2ನೇ ಬಾರಿ ಎ.ಡಿ.ಎಲ್.ಆರ್. ರವರು ಮೊದಲು ಮಾಡಿದ ಭೂಮಾಪಕರ ಮೂಲಕ ಸರ್ವೆ ಮಾಡಿರುತ್ತಾರೆ. ಆಗ ಸ್ಥಳದಲ್ಲಿ ಮಹಜರ್ ಮಾಡಿದ್ದು, ಸದರಿ ಮಹಜರಿಗೆ ನಾನು ಮತ್ತು ವಾದಿ ಸಹಿ ಮಾಡಿರುತ್ತೇವೆ. 1ನೇ ಪ್ರತಿವಾದಿಯು ಮಹಜರಿಗೆ ಸಹಿ ಮಾಡಿದ ಬಗ್ಗೆ ನನಗೆ ಈಗ ನೆನಪಿಲ್ಲ. ನಮ್ಮನ್ನು ಹೊರತುಪಡಿಸಿ ಇತರೆ ಸ್ಥಳೀಯರು ಅಲ್ಲಿ ಇದ್ದ ಬಗ್ಗೆ ನನಗೀಗ ನೆನಪಿಲ್ಲ.ಅಳತೆಯ ಸಂದರ್ಭದಲ್ಲಿ 1ನೇ ಪ್ರತಿವಾದಿಯು 1 ಎಕರೆ ಒತ್ತುವರಿ ಮಾಡಿರುವುದು ಗೊತ್ತಾಗಿರುತ್ತದೆ. ಭೂಮಾಪಕರು ಮಾಡಿದ ಸ್ಕೆಚ್ಚನ್ನು ನಾನು ನೋಡಿರುತ್ತೇನೆ. 2ನೇ ಬಾರಿ ಅಳತೆ ಮಾಡಿದಾಗ ಮುಖ್ಯ ರಸ್ತೆಯಿಂದ ಹಾಗೂ ಕುಟ್ಟಂದಿ ಮತ್ತು ವಿ. ಬಾಡಗ ಗ್ರಾಮಗಳ ಗಡಿ ಗುರುತುಗಳಿಂದ ಅಳತೆ ಮಾಡಿರುತ್ತಾರೆ.

1ನೇ ಪ್ರತಿವಾದಿಯು ಒತ್ತುವರಿ ಮಾಡಿರುವ 1 ಎಕರೆ ಜಮೀನಿನ ಪೂರ್ವಕ್ಕೆ ವಾದಿಗೆ ಸೇರಿದ ಸರ್ವೆ ನಂ. 137/2 ರ ಉಳಿಕೆ ಜಾಗ, ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ 1ನೇ ಪ್ರತಿವಾದಿಗೆ ಸೇರಿದ ಜಾಗ ಮತ್ತು ದಕ್ಷಿಣಕ್ಕೆ ವಾದಿ ಮತ್ತು 1ನೇ ಪ್ರತಿವಾದಿಗೆ ಸೇರಿದ ಜಾಗಗಳಿವೆ. ಸದರಿ ಒತ್ತುವರಿ ಮಾಡಿದ 1 ಎಕರೆ ಜಾಗದಲ್ಲಿ 1ನೇ ಪ್ರತಿವಾದಿಯು ಸುಮಾರು 10-11 ವರ್ಷಗಳಿಂದ ಕಾಫಿ ಕೃಷಿ ಮಾಡಿರುತ್ತಾರೆ. ಒತ್ತುವರಿಯಾಗಿರುವ 1 ಎಕರೆ ಜಮೀನಿಗೆ ಸರ್ವೆ ನಂ. 137/8 ಎಂದು ತಿದ್ದುಪಡಿ ಮಾಡಲಾಗಿರುತ್ತದೆ. ಸದರಿ ತಿದ್ದುಪಡಿಯನ್ನು ಯಾರು ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನಾನು ಸರ್ವೆ ನಂ. 137/8 ರ ಪಹಣಿಯನ್ನು ನೋಡಿರುವುದಿಲ್ಲ. ಸದರಿ ಸರ್ವೆ ನಂಬರ್ ಅನ್ನು ತಿದ್ದುಪಡಿ ಮಾಡಿರುವ ವಿಚಾರ ನನಗೆ 8-10 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ಸದರಿ ವಿಚಾರವು ವಾದಿಗೆ ಗೊತ್ತಿದೆ. ಸದರಿ ಸರ್ವೆ ನಂಬರ್‌ನ ತಿದ್ದುಪಡಿಯನ್ನು 1ನೇ ಪ್ರತಿವಾದಿಯು ಮಾಡಿರಬಹುದೆಂದು ನಾನು ಊಹಿಸಿರುತ್ತೇನೆ. 1ನೇ ಪ್ರತಿವಾದಿಯು ದಾವಾ ಸ್ವತ್ತಿನ ಪೈಕಿ 1 ಎಕರೆ ಜಮೀನನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಭೂಮಾಪಕರು ನಾನು ಹೇಳಿದಂತೆ ಅಳತೆ ಮಾಡಿರುವುದಿಲ್ಲ ಹಾಗೂ ನಾನು ಅಳತೆಯ ಸಂದರ್ಭದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ವಾದಿ ನನ್ನ ಸಂಬಂಧಿ. ವಾದಿಯು ನನ್ನ ಸಂಬಂಧಿಯಾಗಿರುವುದರಿಂದ ಅವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.